**Online at:** https://researchtrendsjournal.com
**ISSN No:** 2584-282X
**Indexed Journal**
**Peer Reviewed Journal**




**INTERNATIONAL JOURNAL OF TRENDS IN EMERGING RESEARCH AND DEVELOPMENT**

**Volume 4; Issue 3; 2026; Page No. 76-78**

**Received: 10-02-2026**
**Accepted: 17-03-2026**
**Published: 26-05-2026**

# ಸಾಮಾಜಿಕ ಬದಲಾವಣೆಯ ನಿಟ್ಟಿನಲ್ಲಿ ವಸಾಹತು ಕಾಲಘಟ್ಟದ ಮಹಿಳಾಪರ ನೀತಿಗಳು

**ಡಾ. ಶೈಲಾ ಕೆ.ಎನ್**

ಅಸೋಸಿಯೇಟ್ ಪ್ರೊಫೆಸರ್, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು, ಕರ್ನಾಟಕ, ಭಾರತ

**DOI:** https://doi.org/10.5281/zenodo.20809037

**Corresponding Author:** ಡಾ. ಶೈಲಾ ಕೆ.ಎನ್

**Abstract**

ವಸಾಹತು ಕಾಲಘಟ್ಟದ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿ ಶೋಚನೀಯವಾಗಿತ್ತು. ೧೯ನೇ ಶತಮಾನದಲ್ಲಿ ಸುಧಾರಣಾ ಚಳುವಳಿಗಳು ಸಾಮಾಜಿಕ ಕಟ್ಟುಪಾಡುಗಳ ವಿರುದ್ಧ ಧ್ವನಿ ಎತ್ತಿದವು. ಆಧುನಿಕತೆ ಮತ್ತು ಸಂಪ್ರದಾಯ ತತ್ವಗಳನ್ನೂ ಒಳಗೊಂಡ ಸುಧಾರಣಾವಾದಿಗಳು ಸತಿ ಪದ್ಧತಿ, ಬಾಲ್ಯವಿವಾಹ, ಮೊದಲಾದ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನ ಮಾಡಲು ಕಾನೂನಾತ್ಮಕ ನೆಲೆಯಲ್ಲಿ ಚೌಕಟ್ಟು ರೂಪಿಸಲು ಪ್ರಯತ್ನಿಸಿದರು. ವಸಾಹತುಶಾಹಿ ಆಳ್ವಿಕೆಯು ಜಾರಿಗೆ ತಂದ ಹೊಸ ಶಿಕ್ಷಣ ಪದ್ಧತಿಯು ಪರೋಕ್ಷವಾಗಿ ಜಿಲ್ಲೆಯ ಮಹಿಳೆಯರು ಎಚ್ಚೆತ್ತುಕೊಳ್ಳುವಂತೆ ಮಾಡಿತು.ಈ ಲೇಖನದಲ್ಲಿ ಮಹಿಳೆಯರ ಕಟ್ಟುಪಾಡುಗಳು ಹಾಗೂ ವಸಾಹತುಶಾಹಿ ಕಾಲ ಘಟ್ಟದಲ್ಲಿ ಅವುಗಳನ್ನು ನಿಯಂತ್ರಿಸಲು ಜಾರಿಗೊಳಿಸಲಾದ ಕಾನೂನುಗಳ ಕುರಿತು ಚರ್ಚಿಸುತ್ತದೆ.

**Keywords:** ಕಟ್ಟುಪಾಡುಗಳು, ವಸಾಹತುಶಾಹಿ, ಸಮಾಜ ಸುಧಾರಕರು, ಕಾಯ್ದೆಗಳು, ಮಹಿಳು

## Introduction

ಬ್ರಿಟಿಷರ ಆಳ್ವಿಕೆಯಲ್ಲಿಯೇ ಸಾಮಾಜಿಕ ಸುಧಾರಣೆಗಳಿಗೆ ಅನ್ವಯಿಸಿದ ಶಾಸನಗಳು ಭಾರತೀಯರ ಜೀವನ ಮತ್ತು ಸಂಸ್ಕೃತಿಗಳಲ್ಲಿ ಅಳವಾಗಿ (ವಿಶೇಷವಾಗಿ ಬಂಗಾಳದಲ್ಲಿ) ನುಸುಳಿದವು. ಸಮಾಜ ಸುಧಾರಕರ ಪ್ರಯತ್ನಗಳಿಂದಾಗಿ ಬ್ರಿಟಿಷ್ ಸರಕಾರವು ಕೆಲವು ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಬಂಬಲ ನೀಡಿತು. ಇವು ಮಹಿಳಾ ಪರ ಸುಧಾರಣೆಗಳ ಪ್ರಮುಖ ಹೆಜ್ಜೆಗಳಾಗಿದ್ದವು.

### ಮಹಿಳಾಪರ ಸಾಮಾಜಿಕ ಸುಧಾರಣಾ ಕಾಯ್ದೆಗಳು

ನೈತಿಕ ಕಟ್ಟುಪಾಡುಗಳು ಮತ್ತು ವಸಾಹತುಶಾಹಿ ರಚನಾಕ್ರಮಗಳು ಶಾಸನಗಳ ಅವಶ್ಯಕತೆಗೆ ಅನುವು ಮಾಡಿತು. ಈ ಶಾಸನಗಳಲ್ಲಿ ಖಾಸಗಿ ಮತ್ತು ನಿಕಟ ಸಂಬಂಧಿ ವಿಷಯಗಳಾದ ವಿವಾಹ, ತಾಯ್ತನ, ಲಿಂಗ ಮತ್ತು ಲೈಂಗಿಕತೆ ಅದೇ ರೀತಿ ಆಸ್ತಿಕಾಯಿದೆಗಳು ಮತ್ತು ಶಿಕ್ಷಣವೂ ಸೇರಿವೆ. ಯೇಜ್ ಆಫ್ ಕನ್ಸಂಟ್ ೧೮೯೧, ಕಾಯ್ದೆಯ ಪ್ರಕಾರ ಹುಡುಗಿಯರ ನ್ಯಾಯಬದ್ಧ ಲೈಂಗಿಕತೆಯ ವಯಸ್ಸಿನ ಮಿತಿಯನ್ನು ೧೦ರಿಂದ ೧೨ಕ್ಕೆ ಏರಿಸಲಾಯಿತು. ವಸಾಹತುಶಾಹಿ ರಾಷ್ಟ್ರದಲ್ಲಿ ಇದೊಂದು ಅಧಿಕ ಚರ್ಚಾಸ್ಪದ ಕಾನೂನಾಗಿ ಸಂಭವಿಸಿತು. ಈ ಕಾಯ್ದೆ ದೇಶಿಯ ಪುರುಷವರ್ಗದ ತೀವ್ರ ಪ್ರತ್ಯಾಘಾತಕ್ಕೊಳಪಟ್ಟಿತು. ಇದೊಂದು ಸಮಾನ ಚಿಂತನೆಯ ಗುಂಪುಗಳಾದ ವಸಾಹತು ಮತ್ತು ವಸಾಹತುಶಾಹಿ ರಾಷ್ಟ್ರಗಳಿಗೆ ಸಂಬಂಧಪಡದೆ ಆಧುನಿಕತೆ ಮತ್ತು ಸಂಪ್ರದಾಯ ತತ್ವಗಳನ್ನೂ ಒಳಗೊಂಡಿತ್ತು.[೧]

ಎಂಟರ ಹರೆಯ ಅಥವಾ ಅದಕ್ಕಿಂತ ಕಡಿಮೆ ಇರುವ ಬಾಲಕಿಯರನ್ನು ಅತ್ಯಾಚಾರಕ್ಕೊಳಪಡಿಸಿದರೆ ಮರಣದಂಡನೆ ಶಿಕ್ಷೆ ಹಾಗೂ ಇತರ ವ್ಯಾಜ್ಯಗಳಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸುವ ಕಾಯ್ದೆಯನ್ನು ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ೧೮೨೮ರಲ್ಲಿ ಜಾರಿಗೊಳಿಸಲಾಯಿತು. ಹತ್ತುವರ್ಷಕ್ಕಿಂತ ಕೆಳಗಿನ ವಯಸ್ಸಿನ ಹೆಣ್ಣುಮಕ್ಕಳನ್ನು ಲೈಂಗಿಕತೆಗೆ ಒಳಪಡಿಸುವುದನ್ನು ಸೆಕ್ಷನ್ ೩೭೬ರ ಭಾರತೀಯ ದಂಡ ಸಂಹಿತೆ ೧೮೬೦ರ ಅನ್ವಯ ಶಿಕ್ಷಾರ್ಹವೆಂದು ಪರಿಗಣಿಸಲಾಯಿತು.[೨] ೧೮೭೦ರಲ್ಲಿ ಜಾರಿಗೆ ಬಂದ ವಿಶೇಷ ಕಾಯ್ದೆ ಭಾರತದ ವಾಯುವ್ಯ ಭಾಗದಲ್ಲಿ ಹೆಣ್ಣು ಶಿಶುಹತ್ಯೆಯನ್ನು ನಿಗ್ರಹಿಸುವಲ್ಲಿ ಪರಿಣಾಮಕಾರಿಯಾಗಿತ್ತು. ಆದರೆ ಈ ಕಾಯ್ದೆಯನ್ನು ೧೯೦೬ರಲ್ಲಿ ಹಿಂಪಡೆಯಲಾಯಿತು. ಇದೊಂದು

ಪರಿಣಾಮಕಾರಿಯಾಗಿದ್ದ ಕಾಯ್ದೆಯಾಗಿದ್ದು ಅತ್ಯಂತ ಕಡಿಮೆ ಅವಧಿಯವರೆಗೆ ಜಾರಿಯಲ್ಲಿದ್ದ ಅದ್ವಿತೀಯ ಕಾಯ್ದೆ ಇದಾಗಿದೆ. ಬಾಲ್ಯವಿವಾಹ ತಡೆಗಟ್ಟುವ ನಿಟ್ಟಿನಲ್ಲಿ ಈಶ್ವರಚಂದ್ರ ವಿದ್ಯಾಸಾಗರ್ ಇವರ ಪ್ರಯತ್ನವನ್ನು ೧೮೭೦ ಮತ್ತು ೧೮೮೦ರಲ್ಲಿ ಕೇಶಬ್ ಚಂದ್ರಸೇನ್ ಮುಂದುವರಿಸಿದರು. ಇವರ ಸತತ ಪ್ರಯತ್ನದಿಂದ ಬಾಲ್ಯವಿವಾಹ, ಬಹುಪತ್ನಿತ್ವ, ಅಂತರ್ಜಾತೀಯ ವಿವಾಹವನ್ನು ನಿಷೇಧಿಸುವ ನಿಟ್ಟಿನಲ್ಲಿ ದೇಶೀಯ ವಿವಾಹ ಕಾಯ್ದೆ ಜಾರಿಗೆ ಬಂದಿತು. ಆದರೆ ಕೇಶಬ್ ಚಂದ್ರಸೇನ್ ತನ್ನ ಮಗಳನ್ನು ೧೪ ವರ್ಷ ತುಂಬುವ ಮೊದಲೇ ವಿವಾಹ ನೆರವೇರಿಸಿರುವುದರಿಂದ ಬ್ರಹ್ಮ ಸಮಾಜದಲ್ಲಿ ಪ್ರತಿರೋಧ ವ್ಯಕ್ತವಾಗಿ ಸಾಧಾರಣ ಬ್ರಹ್ಮಸಮಾಜವೆಂಬ ಹೊಸ ಗುಂಪು ೧೮೭೮ರಲ್ಲಿ ಸ್ಥಾಪನೆಗೊಂಡಿತು.

## ಬಾಲ್ಯವಿವಾಹ ವಿರೋಧಿ ಜಾಗೃತಿ

ವಸಾಹತು ಕಾಲಘಟ್ಟದಲ್ಲಿ ಭಾರತದಾದ್ಯಂತ ಬಾಲ್ಯವಿವಾಹ ದೊಡ್ಡ ಸವಾಲಾಗಿದ್ದು ಸಮಾಜ ಸುಧಾರಕರಾದ ಶ್ರೀ ಮಲಬಾರಿಯವರು ೧೮೮೧ರಲ್ಲಿ ಬ್ರಿಟಿಷ್ ಭಾರತದಲ್ಲಿ ನಡೆದ ಬಾಲ್ಯವಿವಾಹಗಳ ದತ್ತಾಂಶಗಳನ್ನು ನೀಡಿರುವ ಪ್ರಕಾರ ೯ವರ್ಷ ಮೀರುವ ಮೊದಲೇ ವಿವಾಹವಾದ ಪುರುಷರ ಸಂಖ್ಯೆ ೬೬೮೦೦೦ ಆಗಿದ್ದು, ಮಹಿಳೆಯರ ಸಂಖ್ಯೆ ೧೯೩೨೦೦೦ ರಷ್ಟಿತ್ತು. ಅದೇ ರೀತಿ ೧೦ ರಿಂದ ೧೪ ವರ್ಷದಲ್ಲಿ ವಿವಾಹವಾದ ಪುರುಷರ ಸಂಖ್ಯೆ ೧೮೦೮೦೦೦ ರಷ್ಟಿದ್ದು, ಮಹಿಳೆಯರ ಸಂಖ್ಯೆ ೪೯೫೫೦೦ ರಷ್ಟು ಮತ್ತು ೧೫ ರಿಂದ ೧೯ ವರ್ಷದ ಒಳಗೆ ವಿವಾಹವಾದ ಪುರುಷರ ಸಂಖ್ಯೆ ೨೭೪೦೦೦೦ ರಷ್ಟಿದ್ದು, ಮಹಿಳೆಯರ ಸಂಖ್ಯೆ ೫೩೨೩೦೦೦ ರಷ್ಟು ಆಗಿತ್ತು ಎಂಬುವುದಾಗಿ ದಾಖಲೀಕರಿಸಿದ್ದಾರೆ.[೩]

ಬಾಲ್ಯವಿವಾಹದ ಕುರಿತಂತೆ ಪತ್ರಿಕೆಗಳೂ ಜಾಗೃತಿ ಮೂಡಿಸಿರುವುದು ಕಂಡು ಬರುತ್ತದೆ. ಶ್ರೀ ಶಾರದಾ ಸ್ತ್ರೀ ಸಮಾಜ ಬೆಂಗಳೂರು ಇದರ ಗೌರವ ಕಾರ್ಯದರ್ಶಿನಿಯಾದ, ಶ್ರೀಮತಿ ಆರ್.ಕಲ್ಯಾಣಮ್ಮನವರು 'ಬಾಲ್ಯವಿವಾಹ ಖಂಡನ' ಎಂಬ ಲೇಖನದಲ್ಲಿ ಬಾಲ್ಯಾವಸ್ಥೆಯಲ್ಲಿ ವಿವಾಹ ನಡೆಸುವುದರ ವೈಪರೀತ್ಯಗಳ ಕುರಿತು ಎಚ್ಚರಿಸಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡದಲ್ಲಿ ಬಾಲ್ಯ ವಿವಾಹವೆಂಬ ಪಿಡುಗು ತೀವ್ರವಾಗಿದ್ದು, ಭರತಖಂಡದಲ್ಲಿರುವಷ್ಟು ಬಾಲವಿಧವೆಯರು ಪ್ರಪಂಚದ ಇನ್ನಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ ಎಂದು ವಿಷಾದ ವ್ಯಕ್ತ ಪಡಿಸಿದ್ದಾರೆ. ೧೯೨೯ರಲ್ಲಿ ಜಾರಿಗೆ ಬಂದ ಶಾರದಾ ಕಾಯಿದೆಯು ಸ್ತ್ರೀಯರಿಗೆ ವಿವಾಹದ ವಯಸ್ಸನ್ನು ೧೪ ವರ್ಷವೆಂದೂ ಪುರುಷರಿಗೆ ವಿವಾಹದ ವಯಸ್ಸನ್ನು ೧೮ ವರ್ಷವೆಂದೂ ನಿಗದಿ ಪಡಿಸಿತು.

ಸಮಾಜ ಸುಧಾರಕರ ಪ್ರಯತ್ನದಿಂದ ವಿಧವಾ ಪುನರ್ವಿವಾಹ ಕಾಯ್ದೆ ೧೮೫೬ರಲ್ಲಿ ಜಾರಿಗೆ ಬಂದರೂ ಅದಕ್ಕೆ ಪ್ರೋತ್ಸಾಹ ದೊರಕಲಿಲ್ಲ. ಈಶ್ವರಚಂದ್ರ ವಿದ್ಯಾಸಾಗರರು ತಾವು ಸಾಲಗಾರನಾಗುವವರೆಗೆ ತಮ್ಮ ಕೈಯಿಂದ ಹಣ ವ್ಯಯಿಸಿ ಹಲವು ವಿಧವಾ ಪುನರ್ವಿವಾಹಗಳನ್ನು ನೆರವೇರಿಸಿದರು.[೪] ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ವಿಧವಾ ವಿವಾಹಗಳು ನಡೆದಿರುವುದು ಕಂಡುಬರುತ್ತದೆ. ಕುಂದಾಪುರ ತಾಲೂಕು ಹನ್ನಾರ ಮಾಗಣೆ, ನಾಗೋಡಿ ಗ್ರಾಮದ, ಕೋಸನಾಡಿಯ ಶ್ರೀಯುತ ವೆಂಕಟರಮಣಯ್ಯ ಯಾನೆ ಅಪ್ಪಯ್ಯ ಇವರು ಶಿವಮೊಗ್ಗ ಜಿಲ್ಲಾ ಸಾಗರ ತಾಲೂಕು ಅರಬಳ್ಳಿ ಗ್ರಾಮದ ಹಲ್ಕೆರೆ, ಸೂತ ಭಟ್ಟರ ಮಗಳಾದ ಸರಸ್ವತಿ ಬಾಯಿಯೆಂಬ ಕನ್ಯೆಗೆ ವಿಧಿವತ್ತಾಗಿ ವಿಜೃಂಭಣೆಯಿಂದ ಶ್ರೀ ಅಕದಾಸ ಗಣಪತಿ ಭಟ್ಟರ ಮಾಳಿಗೆಯ ಮೇಲೆ (ಮನೆಯಲ್ಲಿ) ಪಾಣಿಗ್ರಹಣ ಮಾಡಿದ ವರದಿಯನ್ನು ಸ್ವದೇಶಾಭಿಮಾನಿ ಪತ್ರಿಕೆ ಪ್ರಕಟಿಸಿತ್ತು.[೫] ವಸಾಹತುಶಾಹಿ ಆಳ್ವಿಕೆಯು ಜಾರಿಗೆ ತಂದ ಹೊಸ ಶಿಕ್ಷಣ ಪದ್ಧತಿಯು ಪರೋಕ್ಷವಾಗಿ ಜಿಲ್ಲೆಯ ಮಹಿಳೆಯರು ಎಚ್ಚೆತ್ತುಕೊಳ್ಳುವಂತೆ ಮಾಡಿತು.

## ವಸಾಹತುಶಾಹಿ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದ ಕೊರಪ್ಪ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲ ಬಾರಿಗೆ ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತಿದ ಮಹಿಳೆ ಕೊರಪ್ಪ. ೧೮೩೯ರಲ್ಲಿ ದಕ್ಷಿಣ ಕನ್ನಡಜಿಲ್ಲೆಯ ವಿಟ್ಲ ಪ್ರದೇಶದ ಬಂಟ ಸಮುದಾಯದ ಶ್ರೀಮಂತ ಮಹಿಳೆಯಾದ ಕೊರಪ್ಪ ಬ್ರಿಟಿಷ್ ಕಲೆಕ್ಟರ್ ಆಗಿದ್ದ ಎಡ್ವರ್ಡ್ ಮಲ್ಟ್ ಬಿ ಮುಂದೆ ದಾವೆ ಹೂಡಿದಳು. ಬ್ರಿಟಿಷರಿಗೆ ಸಲ್ಲಿಸಬೇಕಾಗಿದ್ದ ಭೂ ತೆರಿಗೆಯನ್ನು ನೀಡಿದರೂ ಸಹ ತೆರಿಗೆ ಇಲಾಖೆಯು ಆಕೆಯ ಮೇಲೆ ಹೆಚ್ಚುವರಿ ಸಾಲವನ್ನು ಹೇರಿತು. ತನ್ನ ಮೇಲಿನ ಅನ್ಯಾಯವನ್ನು ಸಹಿಸದ ಕೊರಪ್ಪ ಹಾಗೂ ವ್ಯಾಜ್ಯದಲ್ಲಿ ಗೆಲುವು ಸಾಧಿಸಿದಳು. ಈ ಘಟನೆಯಲ್ಲಿ ಕೊರಪ್ಪ ಧೈರ್ಯವಂತಳಾಗಿ ಪ್ರಜ್ಞೆಮೆರೆದಿದ್ದಾಳೆ.[೬]

## ಸ್ತ್ರೀಪರ ಕಾನೂನು ಸುಧಾರಣೆಗಳು

ಹಿಂದೂ ಮಹಿಳೆಯರ ಅಸ್ತಿ ಹಕ್ಕು ಕಾಯ್ದೆಯು ೧೯೩೭ರಲ್ಲಿ ಜಾರಿಗೆ ಬಂದಿತು. ಈ ಕಾಯ್ದೆಯು ಅನೇಕ ನ್ಯೂನ್ಯತೆಗಳಿಂದ ಕೂಡಿತ್ತು. ಭಾರತದ ವಿವಿಧ ಭಾಗಗಳ ಮಹಿಳೆಯರಿಗೆ ಸಂಬಂಧಿಸಿದಂತೆ ಕಾಯ್ದೆಯ ಅಂಶಗಳಲ್ಲಿ ಸ್ಪಷ್ಟೀಕರಣವಿರಲ್ಲಿಲ್ಲ. ಕ್ರೈಸ್ತರಲ್ಲಿ ವಿಧವಾ ವಿವಾಹಕ್ಕೆ ಸಂಬಂಧಿಸಿದ ಕಟ್ಟುಪಾಡುಗಳು ಉನ್ನತ ವರ್ಗದ ಹಿಂದೂ ಸಂಪ್ರದಾಯದಂತಿತ್ತು. ವಿಧವೆಯಾದವಳು ಏಕಾಂತದಲ್ಲಿದ್ದು ಕಪ್ಪುಸೀರೆ ತೊಟ್ಟು ಯಾವುದೇ ಚಿನ್ನಾಭರಣಗಳ ಅಲಂಕಾರ ನಿಷಿದ್ಧವಾಗಿತ್ತು. (canon law) ಕ್ಯಾನನ್ ಕಾಯ್ದೆ ವಿಧವಾ ವಿವಾಹಕ್ಕೆ ಅವಕಾಶ ನೀಡಿದರೂ ಕೂಡಾ ಕೆಲವೇ ಮಹಿಳೆಯರು ತಮ್ಮ ಸಮುದಾಯದ ಪದ್ಧತಿಯನ್ನು ವಿರೋಧಿಸುವ ಧೈರ್ಯಮಾಡಿದರು. ಪುನರ್ವಿವಾಹವಾದ ಮಹಿಳೆಯನ್ನು ಕೀಳಾಗಿ ನೋಡಲಾಗುತ್ತಿತ್ತು. ಆದರೆ ಜಾತಿ ಭ್ರಷ್ಟರಾಗುತ್ತಿರಲ್ಲಿಲ್ಲ ಮತ್ತು ದುರದೃಷ್ಟವಂತೆ ಎಂದು ಆಕೆಯನ್ನು ದೂರವಿಡುತ್ತಿರಲಿಲ್ಲ. ಕ್ರೈಸ್ತಧರ್ಮದ ಅನುಯಾಯಿಗಳದರೂ ಕೂಡಾ ಹೆಚ್ಚಿನ ಹಿಂದೂ ಸಂಪ್ರದಾಯಗಳು ಜೀವಂತವಾಗಿತ್ತು.[೭]

ಮೊತ್ತ ಮೊದಲ ಮುಸ್ಲಿಂ ವ್ಯಕ್ತಿ ನಿಯಮ ೧೮೭೨ರಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಗೆ ಬಂದಿತು. ಈ ನಿಯಮ ಕಠೋರವಾಗಿತ್ತೆಂದರೆ ಈ ನಿಯಮದ ಪ್ರಕಾರ ತಲಾಖ್ ಮತ್ತು ಬಹುಪತ್ನಿತ್ವದಲ್ಲಿ ಪುರುಷರಿಗೆ ಸ್ವೇಚ್ಛೆಯಿಂದ ವರ್ತಿಸುವ ಅಧಿಕಾರವಿದ್ದರೂ ಎಂತಹ ದುರ್ಭರ ಸಂದರ್ಭದಲ್ಲೂ ಕೂಡಾ ಸ್ತ್ರೀಯರಿಗೆ ವಿಚ್ಛೇದನದ ಅವಕಾಶ ಇರಲೇ ಇಲ್ಲ. ೧೯೨೦ರ ಬಳಿಕ ಕೆಲವು ಮುಸ್ಲಿಂ ಮಹಿಳೆಯರು ತಮ್ಮ ಗಂಡಂದಿರ ದೌರ್ಜನ್ಯ ತಾಳಲಾರದೆ ಅವರಿಂದ ವಿಚ್ಛೇದನ ಪಡೆಯಲು ಮತಾಂತರಗೊಳ್ಳತೊಡಗಿದರು. ತಮ್ಮ ಗಂಡಂದಿರ ದೌರ್ಜನ್ಯದಿಂದ ಪಾರಾಗಲು ಈ ಮಹಿಳೆಯರಿಗಿದ್ದ ಹಾದಿ ಇದೊಂದೆ ಆಗಿತ್ತು. ಇಂತಹ ಹಲವು ಪ್ರಕರಣಗಳಾದಾಗ ಮುಸ್ಲಿಂ ಧರ್ಮಗುರುಗಳು ಮತ್ತು ಸಮಾಜ ಎಚ್ಚೆತ್ತು ತಮ್ಮ ಮಹಿಳೆಯರು ಈ ರೀತಿಯಾಗಿ ಮತಾಂತರಗೊಳ್ಳುವುದನ್ನು ತಡೆಯಲು ನಿಯಮಗಳ ಬದಲಾವಣೆಗೂ ಮುಂದಾದರು. ೧೯೩೭ ಅಥವಾ ೧೯೩೯ರಲ್ಲಿ ಮುಸ್ಲಿಂ ವ್ಯಕ್ತಿ ನಿಯಮ ಹೊಸ ರೂಪ ಪಡೆಯಿತು. ಕೆಲವೊಂದು ನಿರ್ಬಂಧಗಳೊಡನೆ ಮುಸ್ಲಿಂ ಮಹಿಳೆಗೆ ವಿಚ್ಛೇದನದ ಹಕ್ಕನ್ನು ನೀಡಲಾಯಿತು. ಆದರೂ ನ್ಯಾಯಾಲಯದ ಕಟ್ಟೆ ಹತ್ತಿ ಹಲವು

ವರ್ಷಗಳವರೆಗೆ ಹೋರಾಡಿದರೂ ಮಹಿಳೆಗೆ ವಿಚ್ಛೇದನ ದೊರೆಯದಂತಹ ಪರಿಸ್ಥಿತಿ ಇಂದಿಗೂ ಇದೆ.[೮]

## ಉಪಸಂಹಾರ

ಹೀಗೆ ಸುಧಾರಣಾವಾದಿಗಳು ಸಾಮಾಜಿಕ ಚಟುವಟಿಕೆಗಳಿಂದ, ಶಿಕ್ಷಣ ಹಾಗೂ ಕಾನೂನು ಕಾಯಿದೆಗಳಿಂದ ಮಹಿಳೆಯರ ಜೀವನಕ್ರಮದಲ್ಲಿ ಬದಲಾವಣೆಗಳ ಅನಿವಾರ್ಯತೆಯನ್ನು ಮನಗಂಡರು. ಸುಮಿತ್ ಸರ್ಕಾರ್ ಹೇಳುವಂತೆ ‘ಈ ಸುಧಾರಣಾವಾದಿಗಳು ತಮ್ಮ ಕುಟುಂಬ ವಲಯದೊಳಗೇ ಮಹಿಳೆಯರ ಸಂಬಂಧ ಸ್ವರೂಪಗಳನ್ನು ಒಂದಿಷ್ಟು ಪರಿವರ್ತಿಸಿ ಸುಗಮಗೊಳಿಸುವ ಉದ್ದೇಶದವರಾಗಿದ್ದರಷ್ಟೆ. ಹಾಗಾಗಿ ಮಹಿಳಾ ಸಮುದಾಯ ಉನ್ನತಗೊಳ್ಳಬೇಕು ಎನ್ನುವಾಗಲೂ ಹದವಾದ, ಮಿತವಾದ, ನಿಯಂತ್ರಿತವಾದ ಉನ್ನತಿಯನ್ನಷ್ಟೇ ಅಪೇಕ್ಷಿಸಿದ್ದರೇ ಹೊರತು ವಿಮುಕ್ತಿಯ ಸ್ವರೂಪದ್ದಲ್ಲ’[೯] ಮಹಿಳೆಯರ ಪುನರುದ್ಧಾರ ಕಾರ್ಯಕ್ರಮಗಳಲ್ಲಿ ಅವರ ತೊಡಗಿಸುವಿಕೆ ಸಕ್ರಿಯವಾಗಿರದಿದ್ದರೂ, ಮಹಿಳೆಯರು ಬದುಕುವ ಮಾದರಿಯಲ್ಲಿ ಕಂಡು ಬಂದ ಬದಲಾವಣೆಗಳಿಗೆ ಹೊಸ ಶಿಕ್ಷಣ ಕ್ರಮ ಪೂರಕವಾಯಿತು. ಈ ನೀತಿಗಳು ಸಮಾನತೆ, ನ್ಯಾಯ ಮತ್ತು ಪ್ರಗತಿಪರ ಸಮಾಜದ ನಿರ್ಮಾಣಕ್ಕೂ ಭದ್ರ ಅಡಿಪಾಯ ಹಾಕಿವೆ.

## ಪರಾಮರ್ಶನ ಗ್ರಂಥಗಳು


೧. ಕ್ಲೇರ್ ಮಿಡ್ ಗ್ಲೇ: ೧೯೯೮, ಜೆಂಡರ್ ಆಂಡ್ ಇಂಪೀರಿಯಲಿಸಂ, ಮ್ಯಾಂಚೆಸ್ಟರ್ ಯುನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ಪುಟಗಳು ೨೧-೨೩.
೨. ಜಾನಕಿ ನಾಯರ್: ಪೂರ್ವೋಕ್ತ, ಪುಟ ೮೪.
೩. ದಿ ವಿಮೆನ್ ಆಫ್ ಇಂಡಿಯಾ ವಾಟ್ ಕ್ಯಾನ್ ಬಿ ಡನ್ ಫಾರ್ ದೆಂ: ಪೂರ್ವೋಕ್ತ, ಪುಟಗಳು ೪೯-೫೧
೪. ಜಾನಕಿ ನಾಯರ್: ಪೂರ್ವೋಕ್ತ, ಪುಟ ೬೨.
೫. ಸ್ವದೇಶಾಭಿಮಾನಿ, ಮೇ ೨೮, ೧೯೪೩.
೬. ಕೃಷ್ಣಾನಂದ ಹೆಗ್ಡೆ: ೨೦೦೮, ಹಿಸ್ಟರಿ ಆಫ್ ಬಂಟ್ಸ್, ಭಾರತೀಯ ವಿದ್ಯಾ ಭವನ ಮಾತೃ ಕೇಂದ್ರ, ಪಾಂಡೇಶ್ವರ, ಮಂಗಳೂರು.
೭. ಕ್ರಾಂತಿ ಫೆರಾಯೆಸ್: ೧೯೯೯, ದಿ ಕ್ರಿಸ್ಟಿಯನ್ ಇಂಪ್ಯಾಕ್ಟ್ ಇನ್ ಸೌತ್ ಕೆನರಾ, ಚರ್ಚ್ ಹಿಸ್ಟರಿ ಅಸೋಸಿಯೆಶನ್ ಆಫ್ ಇಂಡಿಯಾ, ಮುಂಬಯಿ, ಪುಟ ೫೧.
೮. ಸಾರ ಅಬೂಬಕ್ಕರ್: ೨೦೦೭, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟಗಳು ೧೪೧-೧೪೩.

ಕುಂಕುಂ ಸಂಗಾರಿ ಹಾಗೂ ಸುದೇಶ್ ವೈದ್ (ಸಂ): ೧೯೯೪, ವಿಮೆನ್ ಆಂಡ್ ಕಲ್ಚರ್, ಸರ್ಕಾರ್ ಸುಮಿತ್ ಇವರ ಲೇಖನ - ‘’ದಿ ವಿಮೆನ್ಸ್ ಕ್ವೆಸ್ಚನ್ ಇನ್ ನೈಂಟೀಂತ್ ಸೆಂಚುರಿ ಬೆಂಗಾಲ್’, ರಿಸರ್ಚ್ ಸೆಂಟರ್ ಫಾರ್ ವಿಮೆನ್ಸ್ ಸ್ಟಡೀಸ್, ಪುಟ ೧೦೬.



**Creative Commons (CC) License**

This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.